481(851) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಸಿ ಇ ಟಿ ಮತ್ತು ಕಾಮೆಡ್-ಕೆ ಸೇರಿ ಒಂದೇ ಪ್ರವೇಶ ಪರೀಕ್ಷೆ ನಡೆಸುವ ಪ್ರಸ್ತಾವ ಸರ್ಕಾರದ ಮುಂದಿರುವುದು ನಿಜವೆ,

ಆ) ಹಾಗಿದ್ದಲ್ಲಿ, ಈ ಪ್ರಸ್ತಾವ ಯಾವ ಹಂತದಲ್ಲಿದೆ,

ಇ) 2007-08ನೇ ಸಾಲಿನಿಂದ ಒಂದೇ ಪ್ರವೇಶ ಪರೀಕ್ಷೆ ನಡೆಸಲು ಸರ್ಕಾರ ಯಾವಾಗ ಅಧಿಸೂಚನೆ ಹೊರಡಿಸುವುದು?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಒಂದೇ ಪ್ರವೇಶ ಪರೀಕ್ಷೆ ನಡೆಸುವ ಕುರಿತಂತೆ ಸರ್ಕಾರದ ಚಿಂತನೆಯಲ್ಲಿದೆ ಈ ಬಗ್ಗೆ ವೃತ್ತಿಪರ ಕಾಲೇಜುಗಳ ಆಡಳಿತ ಮಂಡಳಿಯವರೊಂದಿಗೆ ಮಾತುಕತೆ ನಡೆಯುತ್ತಿದೆ

ಇ) ಮಾತುಕತೆಯು ಅಂತಿಮಗೊಂಡು ಒಮ್ಮತದ ತೀರ್ಮಾನ ತೆಗೆದುಕೊಂಡಲ್ಲಿ ಕೂಡಲೇ ಅಧಿಸೂಚನೆ ಹೊರಡಿಸಲಾಗುವುದು

482(852) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಅನಧಿಕೃತ ಶಾಲೆಗಳೆಂದು ಗುರುತಿಸಲ್ಪಟ್ಟ ಶಾಲೆಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು, ಇವರ ವಿದ್ಯಾಭ್ಯಾಸಕ್ಕೆ ಸರ್ಕಾರ ಯಾವ ಪರ್ಯಾಯ ಕ್ರಮ ಕೈಗೊಳ್ಳಲಿದೆ,

ಇ) ಈ ಶಾಲೆಗಳು ಯಾವ ಮಾಧ್ಯಮದಲ್ಲಿ ನಡೆಯುತ್ತಿವೆ,

(ಈ) ಈ ಅನಧಿಕೃತ ಶಾಲೆಗಳು ನಡೆಯಲು ಕಾರಣರಾದವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಅನಧಿಕೃತ ಶಾಲೆಗಳೆಂದು 2215 ಶಾಲೆಗಳನ್ನು ಗುರುತಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಆ) ವಿದ್ಯಾರ್ಥಿಗಳ ಸಂಖ್ಯೆ–300526 ಇದ್ದು, ಈ ಅನಧಿಕೃತ ಶಾಲೆಗಳಲ್ಲಿನ ಮಕ್ಕಳಿಗೆ ಸದರಿ ಶಾಲೆಗಳ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಹಾಗೂ ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಪರ್ಯಾಯ ವ್ಯವಸ್ಥೆ ಕಲ್ಪಿಸಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸಲಾಗಿದೆ

ಇ) ಈ ಶಾಲೆಗಳು ಕನ್ನಡ ಹಾಗೂ ಮಾತೃಭಾಷಾ ಮಾಧ್ಯಮದಲ್ಲಿ ಕಲಿಸಲು ಅನುಮತಿ ಪಡೆದು ಆಂಗ್ಲ ಮಾಧ್ಯಮದಲ್ಲಿ ಕಲಿಸುತ್ತಿದ್ದುದರಿಂದ, ಸದರಿ ಶಾಲೆಗಳ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲಾಗಿದೆ

(ಈ) ಈ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡಲು ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಸೂಚನೆ ನೀಡಲಾಗಿದೆ ಅವರಿಂದ ವರದಿ ಬಂದ ನಂತರ ಅನಧಿಕೃತ ಶಾಲೆಗಳು ನಡೆಯಲು ಕಾರಣರಾದಂತಹ ಅಧಿಕಾರಿಗಳ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು

ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
ಇವರ ಪ್ರಶ್ನೆ ಸಂಖ್ಯೆ 852ಕ್ಕೆ ಅನುಬಂಧ

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
1 ಬೆಂಗಳೂರು ಉತ್ತರ – 378	
ಉತ್ತರ ವಲಯ–1	104
ಉತ್ತರ ವಲಯ–2	33
ಉತ್ತರ ವಲಯ–3	122
ಉತ್ತರ ವಲಯ–4	119

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
2 ಬೆಂಗಳೂರು ದಕ್ಷಿಣ – 643	
ದಕ್ಷಿಣ ವಲಯ–1	148
ದಕ್ಷಿಣ ವಲಯ–2	133
ದಕ್ಷಿಣ ವಲಯ–3	137
ದಕ್ಷಿಣ ವಲಯ–4	158
ಆನೇಕಲ್	67
3 ಬೆಂಗಳೂರು ಗ್ರಾಮಾಂತರ – 147	
ಮಾಗಡಿ	12
ದೊಡ್ಡಬಳ್ಳಾಪುರ	28
ರಾಮನಗರ	35
ಚನ್ನಪಟ್ಟಣ	12
ದೇವನಹಳ್ಳಿ	17
ಹೊಸಕೋಟೆ	05
ನೆಲಮಂಗಲ	26
ಕನಕಪುರ	10
4 ಕೋಲಾರ ಜಿಲ್ಲೆ – 92	
ಬಂಗಾರಪೇಟೆ	17
ಕೋಲಾರ	18
ಕೆ ಜಿ ಎಫ್	29
ಮಾಲೂರು	07
ಶ್ರೀನಿವಾಸಪುರ	12
ಮುಳಬಾಗಿಲು	09

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
5 ಚಿಕ್ಕಬಳ್ಳಾಪುರ ಜಿಲ್ಲೆ – 73	
ಚಿಕ್ಕಬಳ್ಳಾಪುರ	30
ಶಿಡ್ಲಘಟ್ಟ	11
ಚಿಂತಾಮಣಿ	29
ಗೌರಿಬಿದನೂರು	03
6 ತುಮಕೂರು – 137	
ಕುಣಿಗಲ್	08
ಗುಬ್ಬಿ	18
ಚಿಕ್ಕನಾಯಕನಹಳ್ಳಿ	07
ತೊವಿನಕೆರೆ	08
ತಿಪಟೂರು	09
ತುಮಕೂರು	87
7 ಮಧುಗಿರಿ ಜಿಲ್ಲೆ – 81	
ಕೊರಟಗೆರೆ	13
ಮಧುಗಿರಿ	23
ಪಾವಗಡ	17
ಶಿರಾ	28
8 ಶಿವಮೊಗ್ಗ – 27	
ಸಾಗರ	03
ಶಿವಮೊಗ್ಗ	21
ಭದ್ರಾವತಿ	03
9 ಚಿತ್ರದುರ್ಗ – 14	
ಹೊಸದುರ್ಗ	03

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
ಹಿರಿಯೂರು	04
ಚಳ್ಳಕೆರೆ	02
ಹೊಳಲ್ಕೆರೆ	05
10 ದಾವಣಗೆರೆ – 28	
ದಾವಣಗೆರೆ ಉತ್ತರ	07
ದಾವಣಗೆರೆ ದಕ್ಷಿಣ	16
ಹರಪನಹಳ್ಳಿ	01
ಹರಿಹರ	04
11. ಮೈಸೂರು – 14	
ಮೈಸೂರು ತಾ	14
12 ಚಾಮರಾಜನಗರ – 02	
ಕೊಳ್ಳೇಗಾಲ	02
13 ಹಾಸನ – 69	
ಬೇಲೂರು	12
ಅರಸೀಕೆರೆ	17
ಆಲೂರು	03
ಹಾಸನ	21
ಚನ್ನರಾಯಪಟ್ಟಣ	13
ಹೊಳೇನರಸೀಪುರ	03
14 ಮಂಡ್ಯ – 06	
ಮಂಡ್ಯ ತಾ	06
15 ಚಿಕ್ಕಮಗಳೂರು – 21	
ಬೀರೂರು	01

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
ಚಿಕ್ಕಮಗಳೂರು	02
ತರೀಕೆರೆ	10
ಕೊಪ್ಪ	05
ಕಡೂರು	05
ಎನ್ ಆರ್ ಪುರ	01
ಮೂಡಬಿದರೆ	01
16 ಉಡುಪಿ – 16	
ಕಾರ್ಕಳ	03
ಕುಂದಾಪುರ	04
ಉಡುಪಿ	04
ಬ್ರಹ್ಮಾವರ	05
17 ದಕ್ಷಿಣ ಕನ್ನಡ – ಶೂನ್ಯವರದಿ	
18 ಕೊಡಗು – 31	
ಸೋಮವಾರಪೇಟೆ	12
ಮಡಿಕೇರಿ	11
ವಿರಾಜಪೇಟೆ	10
19 ಬೆಳಗಾಂ – 11	
ಬೆಳಗಾಂ ನಗರ	06
ಸವದತ್ತಿ	03
ರಾಮದುರ್ಗ	02
20 ಬಿಕ್ಕೋಡಿ–ಶೂನ್ಯ ವರದಿ	
21 ಬಿಜಾಪೂರ – 26	
ಬಿಜಾಪೂರ ನಗರ	18

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
ಬಾಗೇವಾಡಿ	05
ಸಿಂಧಗಿ	01
ಮುದ್ದೇಬಿಹಾಳ	02
22 ಬಾಲಗಕೋಟೆ – 36	
ಬಾದಾಮಿ	03
ಬಾಗಲಕೋಟೆ	01
ಬೀಳಗಿ	15
ಹುನಗುಂದ	10
ಜಮಖಂಡಿ	05
ಮುಧೋಳು	02
23 ಧಾರವಾಡ – 14	
ಹುಬ್ಬಳ್ಳಿ	13
ಧಾರವಾಡ	01
24 ಗದಗ – 10	
ಗದಗ ಶಹರ	04
ಗದಗ ಗ್ರಾಮೀಣ	02
ಶಿರಹಟ್ಟಿ	04
25 ಕಾರವಾರ – 10	
ಭಟ್ಕಳ	04
ಶಿರಿಸಿ	04
ಕಾರವಾರ	02
26 ಹಾವೇರಿ – 01	
ಹಾವೇರಿ	01

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
27 ಗುಲ್ಬರ್ಗಾ – 38	
ಚಿತ್ತಾಪೂರ	07
ಗುಲ್ಬರ್ಗಾ ದಕ್ಷಿಣ	21
ಗುಲ್ಬರ್ಗಾ ಉತ್ತರ	06
ಜೇವರ್ಗಿ	04
28 ಯಾದಗಿರಿ – 18	
ಸೇಡಂ	07
ಯಾದಗಿರಿ	04
ಶಹಪೂರ	07
29 ಬಳ್ಳಾರಿ – 99	
ಬಳ್ಳಾರಿ	81
ಹೊಸಪೇಟೆ	08
ಕೂಡ್ಲಗಿ	03
ಹಡಗಲಿ	07
30 ರಾಯಚೂರು – 81	
ದೇವದುರ್ಗ	05
ಲಿಂಗಸುಗೂರು	15
ಮಾನವಿ	36
ರಾಯಚೂರು	17
ಸಿಂಧನೂರು	08
31 ಕೊಪ್ಪಳ – 31	
ಕೊಪ್ಪಳ	15
ಕುಷ್ಟಗಿ	03

ಜಿಲ್ಲೆಯ ಹೆಸರು	ತಾಲ್ಲೂಕುವಾರು ವಿವರ
ಗಂಗಾವತಿ	03
ಯಲಬುರ್ಗಿ	10
32 ಬೀದರ್ – 61	
ಬಸವಕಲ್ಯಾಣ	06
ಭಾಲ್ಕಿ	09
ಬೀದರ್	26
ಹುಮ್ನಾಬಾದ್	20

483(854) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ, (ತಾಲ್ಲೂಕುವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ, (ತಾಲ್ಲೂಕುವಾರು ವಿವರ ನೀಡುವುದು)

ಇ) ಗಾಂಧೀನಗರ ಕ್ಷೇತ್ರದ ಶೇಷಾದ್ರಿಪುರಂನಲ್ಲಿ ಸರ್ಕಾರಿ ಪ್ರೌಢಶಾಲೆಯಿದ್ದರೂ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡದಿರಲು ಕಾರಣವೇನು,

ಈ) 2007–08ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಶೇಷಾದ್ರಿಪುರಂಗೆ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?